5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10011/2021

ಪಿಡಬ್ಲ್ಯೂ 10
ಸಿಡಬ್ಲ್ಯೂ 15

ಸಾಕ್ಷಿ ಹೆಸರು - ಶ್ರೀಕಾಂತ್
ತಂದೆ ಹೆಸರು - ರಂಗಪ್ಪ
ವಯಸ್ಸು - 44 ವರ್ಷ
ಉದ್ಯೋಗ - ಮುಖ್ಯ ಪೇದೆ ,ಕೋಟೆ ಪೋಲೀಸ್ ಠಾಣೆ,ಶಿವಮೊಗ್ಗ
ವಿಳಾಸಃ - ಶಿವಮೊಗ್ಗ

ಪ್ರಮಾಣ ವಚನ ಭೋದಿಸಿದ ದಿನಾಂಕಃ 24-03-2023.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ದಿಃ 20-05-2015 ರಿಂದ ದಿಃ 02-06-2017 ರ ವರೆಗೆ ಸಾಗರ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ13-03-2016 ರಂದು ಸಾಗರ ಗ್ರಾಮಾಂತರ ಪೋಲೀಸ್ ಠಾಣಾ ಗುನ್ನ ನಂಃ 150/2016 ರಲ್ಲಿ ಸಂಜೆ 5-30 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ನಮ್ಮ ಠಾಣೆಯ ಚಾಸಾ -20 ರವರು ನನ್ನನ್ನು ಮತ್ತು ಚಾಸಾ-16 ಮತ್ತು ಚಾಸಾ17 ರವರನ್ನು ಕರೆದು ಸದರಿ ಪ್ರಕರಣದಲ್ಲಿ ಆರೋಪಿಗಳ ದಸ್ತಗಿರಿಗಾಗಿ ನಮ್ಮಗಳನ್ನು ಕರೆದುಕೊಂಡು ಇಲಾಖಾ ಜೀಪಿನಲ್ಲಿ ನಾವುಗಳು ಸಂಜೆ 5-30 ಗಂಟೆಗೆ ಠಾಣೆಯಿಂದ ಹೊರಟು ಚಾಸಾ-20 ರವರು ಸದರಿ ಪ್ರಕರಣದಲ್ಲಿ ಆರೋಪಿಗಳ ದಸ್ತಗಿರಿ ಬಗ್ಗೆಬಾತ್ಮಿದಾರರಿಂದ ಮಾಹಿತಿ ಸಂಗ್ರಹಿಸಲಾಗಿ ಸದರಿ ಆರೋಪಿಗಳು ಹೆಬ್ಬರಿಗೆ ಗ್ರಾಮದ ತಮ್ಮ ಮನೆಯಲ್ಲಿ ಇರುವುದಾಗಿ ಮಾಹಿತಿಯನ್ನು ಖಚಿತಪಡಿಸಿಕೊಂಡು ನಾವುಗಳಲ್ಲೆರೂ ಸಂಜೆ 6-15 ಗಂಟೆಗೆ ಸದರಿ ಆರೋಪಿಗಳ ಮನೆಗೆ ಹೋಗಿ ಆರೋಪಿಗಳನ್ನು ವಶಕ್ಕೆ ಪಡೆದು ನಂತರ ಚಾಸಾ-20 ರವರು ಅವರ ಹೆಸರು ವಿಳಾಸ ಕೇಳಲಾಗಿ ಕೇಶವಮೂರ್ತಿ ಬಿನ್ ಭದ್ರಪ್ಪಗೌಡ , ಮಮತಾ ಕೋಂ ಕೇಶವಮೂರ್ತಿ , ರವೀಂದ್ರ ಬಿನ್ ವೀರಭದ್ರ , ವಾಸ ಃ ಮುಂಬಾರು ಹೊಸನಗರ ತಾಲ್ಲೂಕು ಎಂದು ತಿಳಿಸಿದವರನ್ನು ಸದರಿ ಪ್ರಕರಣದ ಆರೋಪಿಗಳೆಂದು

ಖಚಿತಪಡಿಸಿಕೊಂಡು ಅವರನ್ನು ಕರೆದುಕೊಂಡು ವಾಪಾಸ್ ಸಂಜೆ 7-15 ಗಂಟೆಗೆ ಠಾಣಗೆ ವಾಪಾಸ್ ಬಂದಿದ್ದು ನಂತರ ಚಾಸಾ-20 ರವರು ಅವರನ್ನು ಕೂಲಂಕುಶವಾಗಿ ವಿಚಾರಣೆ ಮಾಡಿ ದಸ್ತಗಿರಿ ಕ್ರಮ ಜರುಗಿಸಿರುತ್ತಾರೆ.

ಈ ಬಗ್ಗೆ ದಿಃ17-03-2016 ರಂದು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ. 1 ಮತ್ತು 2 ನೇ ಆರೋಪಿತರು ಇಂದು ನ್ಯಾಯಾಲಯದ ಮುಂದೆ ಹಾಜರು ಇದ್ದು ಸಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ. 3 ನೇ ಆರೋಪಿ ಗೈರು ಹಾಜರು ಇದ್ದು ಅವರ ಪರ ವಕೀಲರು 3 ನೇ ಆರೋಪಿಯ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಆರೋಪಿತರ ದಸ್ತಗಿರಿ ಕ್ರಮವನ್ನು ನನ್ನ ಮುಂದೆ ಮಾಡಿರುವುದಿಲ್ಲ, ಠಾಣೆಯಲ್ಲಿ ತನಿಖಾಧಿಕಾರಿಗಳು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಕೇಸಿಗೆ ಅನುಕೂಲವಾಗಲಿ ಎಂದು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ಯಾರು ಟೈಪ್ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ಕೇಸಿಗೆ ಅನುಕೂಲವಾಗಲಿ ಎಂದು ದಾಖಲೆಯನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).